**ಪರ್ಯಾಯ ಶೈಕ್ಷಣಿಕ ಯೋಜನೆ – 2021–22 – ಸೇತುಬಂಧ ಕಾರ್ಯ ಯೋಜನೆ**

**ವಿಷಯ: ಕನ್ನಡ** **ತರಗತಿ: 2**

ಜುಲೈ 1ನೇ ತಾರೀಖಿನಿಂದ ವಾರದಲ್ಲಿ 6 ದಿನಗಳಂತೆ ಒಟ್ಟು 45 ಅವಧಿಗಳು

| ತಿಂಗಳು/ ದಿನ | ಕಲಿಕಾಂಶ | ಪರ್ಯಾಯ ಬೋಧನಾ ಕಲಿಕಾ ತಂತ್ರಗಳು | ಇಲಾಖೆಯಿಂದ ಲಭ್ಯವಿರುವ ಸಂಪನ್ಮೂಲಗಳು | ಮೌಲ್ಯಮಾಪನ ತಂತ್ರಗಳು ಮತ್ತು ದಾಖಲೆಗಳು |
|---|---|---|---|---|
| ದಿನ 1 | ಸಂದರ್ಭಗಳ ಸಹಾಯದಿಂದ ಮುದ್ರಿತ ಸಾಮಾಗ್ರಿಯ ಅರ್ಥ ಮತ್ತು ಉದ್ದೇಶವನ್ನು ಅರಿಯುತ್ತಾರೆ. | • ಪೂರ್ವಭಾವಿ ಚಟುವಟಿಕೆಯಾಗಿ 1ನೇ ತರಗತಿ ಪಠ್ಯಪುಸ್ತಕದ ಪುಟಸಂಖ್ಯೆ 32ರಲ್ಲಿರುವ ಚಿತ್ರಗಳನ್ನು ತೋರಿಸಿ ಚಟುವಟಿಕೆ ಮಾಡಿಸುವುದು.<br>• ಮುದ್ರಿತ ಹಾಳೆಗಳಾದ ಬಿಸ್ಕೆಟ್, ಸೋಪ್, ಚಾಕೊಲೇಟ್, ಇತರೆ ಕವರ್ ಗಳನ್ನು ಬಳಸಿ ಗುರುತಿಸಿ ಅರ್ಥೈಸಿಕೊಳ್ಳಲು ಹಾಗೂ ಉದ್ದೇಶ ಅರಿಯಲು ಚಟುವಟಿಕೆ ಮಾಡುವುದು. | ಪಠ್ಯಪುಸ್ತಕ ಪುಟ ಸಂಖ್ಯೆ 32 ಹಾಗೂ ಕಾರ್ಯ ಹಾಳೆ ಸಂಖ್ಯೆ 1 & 2 | ಮುದ್ರಿತ ಸಾಮಾಗ್ರಿಗಳನ್ನು ಗುರುತಿಸುವ, ಅರ್ಥೈಸುವ ಮೌಖಿಕ ಚಟುವಟಿಕೆ. |
| ದಿನ 2 | | • ಬಾವುಟ, ಶಾಲೆ, ಚಿಟ್ಟೆ.... ಇತರೆ ಚಿತ್ರಗಳನ್ನು ಗುರುತಿಸುವರು, ಅರ್ಥ ಹೇಳುವರು ಹಾಗೂ ಚಿತ್ರಗಳಿಗೆ ಬಣ್ಣ ಹಾಕುವರು | ಕಾರ್ಯ ಹಾಳೆ 3 | ಚಿತ್ರ ಗುರುತಿಸುವರು, ಕೊಟ್ಟ ಚಿತ್ರಗಳಿಗೆ ಬಣ್ಣ ತುಂಬುವರು |
| ದಿನ 3 | | • ಮುದ್ರಿತ ಚಿತ್ರಗಳನ್ನು ಗುರುತಿಸಿ ಅವುಗಳನ್ನು ಬಳಸಿದ ಸಂದರ್ಭಗಳನ್ನು ಹೇಳುವರು. (ಮಾರ್ಗದರ್ಶಕರು ಚಿತ್ರ ಹಾಳೆಯನ್ನು ಬಳಸಿ ಮೌಖಿಕವಾಗಿ ಪ್ರತಿಕ್ರಿಯೆ ಪಡೆಯುವುದು) | ಕಾರ್ಯಹಾಳೆ 4 | ಚಿತ್ರಗಳನ್ನು ನೋಡಿ ಬಳಸುವ ಸಂದರ್ಭವನ್ನು ಹೇಳುವರು. |
| ದಿನ 4 | ಮುದ್ರಿತ ಚಿತ್ರ ಗುರುತಿಸುತ್ತಾರೆ / ಓದುತ್ತಾರೆ. ಮುದ್ರಿತ ಬರವಣಿಗೆ ಮತ್ತು ಚಿತ್ರ ಗುರುತಿಸುತ್ತಾರೆ. | • ಚಿತ್ರ ಸಹಿತ ಪದಗಳಲ್ಲಿರುವ ಚಿತ್ರಗಳನ್ನು ಮಕ್ಕಳು ಗುರುತಿಸುವರು. ಮಾರ್ಗದರ್ಶಕರು ಆ ಚಿತ್ರದ ಲಿಖಿತ ರೂಪವನ್ನು ಓದುವರು ಚಿತ್ರದೊಂದಿಗೆ ಸಂಯೋಜಿಸುವರು. ಮಕ್ಕಳು ಶಿಕ್ಷಕರನ್ನು ಅನುಪಾಲಿಸುವರು. (ಚಿತ್ರ ಸಹಿತ ಪದಗಳ ಕಾರ್ಯಹಾಳೆಗಳು– ಪಠ್ಯಪುಸ್ತಕ ಪುಟಸಂಖ್ಯೆ 41ನ್ನು ಬಳಸುವುದು) | ಪಠ್ಯಪುಸ್ತಕ ಕಾರ್ಯ ಹಾಳೆ 5 | ಚಿತ್ರಗಳನ್ನು ನೋಡಿ ಪದ ಗುರುತಿಸುವರು / ಹೇಳುವರು |
| ದಿನ 5 ಮತ್ತು 6 | | • ಮುದ್ರಿತ ಚಿತ್ರ ಹಾಗೂ ಚಿತ್ರ ಪದಗಳ 4 ಕಾರ್ಯ ಹಾಳೆಗಳನ್ನು ನೀಡಿದ್ದು ಮಾರ್ಗದರ್ಶಕರು ಪ್ರತಿದಿನ 2 ಹಾಳೆಗಳನ್ನು ಬಳಸಿ ಮಕ್ಕಳು ಗುರುತಿಸಿ ಓದಲು ಅಭ್ಯಾಸ ಮಾಡಿಸುವುದು. | ಕಾರ್ಯ ಹಾಳೆ 6 | ಚಿತ್ರಪದ ಗುರುತಿಸಿ ಓದುವರು. |

| | | | | |
|---|---|---|---|---|
| ದಿನ 7 | ಪರಿಚಿತ ಮತ್ತು ಅಪರಿಚಿತ ಬರಹಗಳಲ್ಲಿ ಆಸಕ್ತಿ ತೋರಿ ಶಬ್ಧಗಳನ್ನು ಗುರುತಿಸಲು ಪ್ರಯತ್ನಿಸುವರು. | • ಮುದ್ರಿತ ಚಿತ್ರಗಳನ್ನು ಮಕ್ಕಳಿಗೆ ಗುರುತಿಸಲು ಹೇಳುವುದು. ಪರಿಚಿತ ಹೆಸರನ್ನು ಮಕ್ಕಳು ಹೇಳಿದ ನಂತರ ಚಿತ್ರದೊಂದಿಗೆ ಅಪರಿತ ಶಬ್ದಗಳನ್ನು ಪರಿಚಯಿಸುವುದು. ಉದಾ; ಮಕ್ಕಳು ಚಿತ್ರವನ್ನು ನೋಡಿ ಸೂರ್ಯ ಎಂದು ಗುರುತಿಸುವರು. ಇದರ ಇನ್ನೊಂದು ಪದ 'ಇನ' ಎಂದು ಪರಿಚಯಿಸುವುದು. | ಚಿತ್ರಗಳ ಕಾರ್ಯ ಹಾಳೆಗಳು 8 | ಚಿತ್ರ ನೋಡಿ ಪರಿಚಿತ ಪದಗಳನ್ನು ಹೇಳುವರು ಹಾಗೂ ಅಪರಿಚಿತ ಪದಗಳನ್ನು ತಿಳಿದು ಪುನರುಚ್ಛರಿಸುವರು. |
| ದಿನ 8 | | • ಅಪರಿಚಿತ ಶಬ್ಧಗಳುಳ್ಳ ಕಾರ್ಯಹಾಳೆಗಳನ್ನು ಬಳಸಿಕೊಂಡು ಪದಗಳನ್ನು ಪರಿಚಯಿಸುವುದು. (1ನೇ ತರಗತಿ ಪಠ್ಯಪುಸ್ತಕದಿಂದ ಆಯ್ದ ಚಿತ್ರಗಳು ಮತ್ತು ಅಪರಿಚಿತ ಪದಗಳು)<br>• 2 ಕಾರ್ಯಹಾಳೆಗಳನ್ನು ನೀಡಿದ್ದು ಚಟುವಟಿಕೆ ಮಾಡುವುದು. | ಪಠ್ಯಪುಸ್ತಕ ಕಾರ್ಯ ಹಾಳೆ–9,10 | ಪರಿಚಿತ ಹಾಗೂ ಅಪರಿಚಿತ ಪದಗಳನ್ನು ಗುರುತಿಸಿ ಹೇಳುವರು. |
| ದಿನ 9&10 | ಅಕ್ಷರ ಬರಹ ಪೂರ್ವ ರೇಖಾಭ್ಯಾಸ ತಿದ್ದಿ ನಕಲು ಮಾಡುವರು. | • ವರ್ಣಮಾಲೆಯ ಅಕ್ಷರಗಳ ಬರವಣಿಗೆಗೆ ಸಿದ್ದಗೊಳಿಸಲು ವೃತ್ತ,ಅರ್ಧವೃತ್ತ, ಗೆರೆಗಳ ರೇಖಭ್ಯಾಸ ಮಾಡಿಸುವುದು.<br>8 ಕಾರ್ಯಹಾಳೆಗಳನ್ನು ನೀಡಿದ್ದು ದಿನಕ್ಕೆ 2/3 ರಂತೆ ಅಭ್ಯಾಸ ಮಾಡಿಸುವುದು. | ರೇಖಾಭ್ಯಾಸ ಕಾರ್ಯ ಹಾಳೆಗಳು 1ನೇ ತರಗತಿ ಪಠ್ಯಪುಸ್ತಕ ಪುಟ ಸಂಖ್ಯೆ 21 ರಿಂದ 27 ಕಾರ್ಯ ಹಾಳೆ 11 ರಿಂದ 18 | ರೇಖಾಭ್ಯಾಸವನ್ನು ಮಾದರಿಯಂತೆ ತಿದ್ದಿ ನಕಲು ಮಾಡುವರು. |
| ದಿನ 11 & 12 | ವರ್ಣಮಾಲೆಯ ಅಕ್ಷರಗಳ ಆಕಾರ ಮತ್ತು ಧ್ವನಿಯನ್ನು ಗುರುತಿಸಿ ಓದುತ್ತಾರೆ ಮತ್ತು ಬರೆಯುತ್ತಾರೆ. | • ರ, ಗ, ಸ, ದ, ಅ – ಅಕ್ಷರಗಳ ಗಾತ್ರ ಹಾಗೂ ಧ್ವನಿಯನ್ನು ಗುರುತಿಸುವುದು ಹಾಗೂ ಬರೆಯುವುದನ್ನು ಮಾರ್ಗದರ್ಶಕರುಹೇಳಿಕೊಡುವುದು. ಮಾರ್ಗದರ್ಶಕರು ವೀಡಿಯೋ ತೋರಿಸಿ ಬರೆಯಲು ಹೇಳುವುದು. ಉದಾ: ಬೀಜ, ಕಲ್ಲು ಇತ್ಯಾದಿಗಳ ಸಹಾಯದಿಂದ ಅಕ್ಷರಗಳ ಆಕಾರ ಗುರುತಿಸಲು ಅನುಕೂಲಿಸುವುದು. ಬರೆಯುವ ಕ್ರಮವನ್ನು ತೋರಿಸಿಕೊಡುವುದು ಹಾಗೂ ಉಚ್ಚಾರಣೆಯನ್ನು ಅಭ್ಯಾಸ ಮಾಡಿಸುವುದು.<br>ಬರವಣಿಗೆ ಆಭ್ಯಾಸಕ್ಕೆ 1. ಗಾಳಿಯಲ್ಲಿ ಬರೆಯುವುದು (ಏರ್ ಬ್ರಷ್) 2. ಮರಳಿನಲ್ಲಿ ಬರೆಯುವುದು, 3. ನೆಲದ ಮೇಲೆ ಬರೆಯುವುದು 4. ಅಕ್ಷರಗಳನ್ನು ತಿದ್ದುವುದು 5. ನಕಲು ಮಾಡುವುದು. ಈ ವಿಧಾನಗಳನ್ನು ಅನುಸರಿಸುವುದು.<br>ಕಾರ್ಯ ಹಾಳೆ ಅಥವಾ ಕಾಪಿ ಪುಸ್ತಕದಲ್ಲಿ ನಕಲು ಮಾಡಿಸುವುದು. | ಪಠ್ಯಪುಸ್ತಕ ಪುಟಸಂಖ್ಯೆ 36 ಅಕ್ಷರಗಳ ಬರವಣಿಗೆಯ ಕುರಿತ ವೀಡಿಯೋ ಲಿಂಕ್, https://youtu.be/5EAo-yt8EsA<br><br>ನಲಿಕಲಿ ಕಾರ್ಡಗಳು | ರ, ಗ. ಸ. ದ. ಅ ಅಕ್ಷರಗಳನ್ನು ಸ್ಪಷ್ಟ ಉಚ್ಚಾರದೊಂದಿಗೆ ಬರೆಯುವರು. |
| ದಿನ 13 | ರ. ಗ, ಸ. ದ. ಅ – ಅಕ್ಷರಗಳಿಂದ ಪದಗಳ ರಚನೆ ಮಾಡುವರು | • ರ. ಗ. ಸ. ದ. ಅ – ಅಕ್ಷರಗಳಿಂದ ರಚಿಸಬಹುದಾದ ಪದಗಳನ್ನು ಸರಿಯಾದ ಕ್ರಮದಲ್ಲಿ ಬರೆಯಲು ಹಾಗೂ ಉಚ್ಛರಿಸಲು ಅಭ್ಯಾಸ ಮಾಡಿಸುವುದು. | ನಲಿಕಲಿ ಸಾಧನಾ ಕಾರ್ಡ್ ಕಾರ್ಯ ಹಾಳೆ 19, 20 | ಎರಡು, ಮೂರು, ನಾಲ್ಕು ಅಕ್ಷರದ ಪದಗಳನ್ನು ಓದುವರು |

| | | | | |
|---|---|---|---|---|
| | | ಉದಾ: ಸರ, ರಸ. ಅರ. ಗರ. ದರ, ಅರಸ. ಸರಸ<br>• ಎರಡು, ಮೂರು, ನಾಲ್ಕು ಅಕ್ಷರಗಳ ಪದಗಳನ್ನು ಓದಲು ಮತ್ತು ಬರೆಯಲು ಸಹಾಯ ಮಾಡುವುದು. | | ಮತ್ತು ಬರೆಯವರು. |
| ದಿನ 14 | ವರ್ಣಮಾಲೆಯ ಅಕ್ಷರ ಹಂತ 2ನ್ನು ಕಲಿಯುವರು | • 2ನೇ ಹಂತದ ಅಕ್ಷರಗಳಾದ ಜ, ವ, ಮ. ಬ. ನ ಅಕ್ಷರಗಳನ್ನು ಗುರುತಿಸಿ ಓದಲು ಹಾಗೂ ಬರೆಯಲು ಅಭ್ಯಾಸ ಮಾಡಿಸುವುದು. (ಬರವಣಿಗೆ ಅಭ್ಯಾಸದ ವಿಧಾನಗಳನ್ನು ಅನುಸರಿಸುವುದು)<br>1ನೇ ತರಗತಿ ಪಠ್ಯಪುಸ್ತಕದ ಪುಟಸಂಖ್ಯೆ 41 & 42 ನ್ನು ಬಳಸಿ ಅಭ್ಯಾಸ ಮಾಡಿಸುವುದು. | ಪಠ್ಯಪುಸ್ತಕ<br>ಅಕ್ಷರ ಧ್ವನಿ ಹಾಗೂ ಬರವಣಿಗೆಯ ವೀಡಿಯೋ ಲಿಂಕ್<br>https://youtu.be/b571Rrgg1SY | ಜ, ವ, ಬ, ಮ, ನ ಅಕ್ಷರಗಳನ್ನು ಓದುವರು ಮತ್ತು ಬರೆಯುವರು |
| ದಿನ 15 | ಜ. ವ. ಮ, ಬ. ನ ಅಕ್ಷರಗಳಿಂದ ಪದ ಹಾಗೂ ವಾಕ್ಯಗಳ ರಚನೆ ಮಾಡುವರು. | • ಕಲಿತ ಅಕ್ಷರಗಳಿಂದ ಪದ ರಚನೆ ಮಾಡಿಸುವುದು, ಉದಾ; ಜನ, ಮನ, ವನ, ಬನ,<br>• ಪಠ್ಯಪುಸ್ತಕ ಹಾಗೂ ಕಾರ್ಯಹಾಳೆಗಳನ್ನು ಬಳಸಿ ಸರಳ ಪದ ಹಾಗೂ ವಾಕ್ಯ ರಚನೆ ಮಾಡಲು ಸಹಾಯ ಮಾಡುವುದು. | ಪಠ್ಯಪುಸ್ತಕ<br>ಕಾರ್ಯ ಹಾಳೆ 21, 22 | ಜ. ವ. ಮ. ಬ. ನ ಅಕ್ಷರಗಳಿಂದ ಪದ ರಚನೆ ಮಾಡಿ ಬರೆಯುವರು ಮತ್ತು ಓದುವರು. |
| ದಿನ 16 | ಮೌಲ್ಯ ಮಾಪನ | • 1 ರಿಂದ 15 ದಿನಗಳವರೆಗೆ ಕಲಿತ ಕಲಿಕಾಂಶಗಳನ್ನು ಆಧರಿಸಿ ಮೌಖಿಕ ಹಾಗೂ ಲಿಖಿತ ಮೌಲ್ಯಮಾಪನವನ್ನು ಮಾಡುವುದು.<br>• ಲಿಖಿತ ಮೌಲ್ಯಮಾಪನಕ್ಕೆ ಕಾರ್ಯಹಾಳೆಯನ್ನು ನೀಡಿದ್ದು, ಮೌಖಿಕ ಮೌಲ್ಯಮಾಪನವನ್ನು ಆಡಿಯೋ/ವೀಡಿಯೋ ರೆಕಾರ್ಡ ಮಾಡಿಕೊಂಡು ದಾಖಲೆ ನಿರ್ವಹಿಸುವುದು. | ಪ್ರಶ್ನೆಪತ್ರಿಕೆ ಕಾರ್ಯಹಾಳೆ ಪಠ್ಯಪುಸ್ತಕದ ಅಭ್ಯಾಸ ಹಾಳೆಗಳು | ಲಿಖಿತ / ಮೌಖಿಕ ಮೌಲ್ಯಮಾಪನ |

ದಿನ : 16 ಮೌಲ್ಯಮಾಪನ ಚಟುವಟಿಕೆ ತರಗತಿ : 02

ವಿಷಯ : ಕನ್ನಡ

**I.** **ಈ ಕೆಳಗಿನ ಪದಗಳನ್ನು ನಕಲು ಮಾಡು :**

ಅರ ಸರ ಗರ ದಸರ ಗರಗಸ ಗಗನ ವನಜ ಅವಸರ

______________________________________________________________________________

______________________________________________________________________________

**ಪದಗಳಲ್ಲಿ ಬಿಟ್ಟುಹೋಗಿರುವ ಅಕ್ಷರಗಳನ್ನು ಆವರಣದಲ್ಲಿ ನೀಡಿರುವ ಅಕ್ಷರಗಳಿಂದ ಸೂಕ್ತವಾದುದನ್ನು ಆರಿಸಿ ಬರೆಯಿರಿ.**

1. ಗ___ಗಸ (ರ, ದ, ಅ)
2. ಸ___ರ (ರ, ಗ, ಸ)
3. ಅರ___ (ರ, ಸ, ಅ)
4. ಗ____ (ಜ, ಅ, ವ)
5. ಜ____ (ನ, ಅ, ಬ)

**II.** **ಚಿತ್ರ ನೋಡಿ ಪದ ಬರೆ :**







**III.** **ಈ ಕೆಳಗಿನ ಅಕ್ಷರಗಳನ್ನು ಬಳಸಿ ಯಾವುದಾದರೂ 5 ಪದಗಳನ್ನು ರಚಿಸಿ**

**ರ ಗ ಸ ದ ಅ ಜ ವ ಮ ಬ ನ**